any cost ಎಂದರೆ, ಇಲ್ಲಿ ಗೈಡ್‌ಲೈನ್ಸ್ ವಾಯ್‌ಲೇಟ್ ಮಾಡುವುದಲ್ಲದೆ, ಕಾರ್ಯಕ್ರಮವನ್ನೂ ಕೂಡ ವಾಯ್‌ಲೇಟ್ ಮಾಡಿದಂತಾಗುತ್ತಿದೆ. Subsequent ಆಗಿ Not to change ಎಂದು orders pass ಮಾಡುವುದು ಎಂದರೆ, What kind of a officer is he? That is not the way an officer should function.

**ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ಸಚಿವರು):** ಮಾನ್ಯ ಉಪಾಧ್ಯಕ್ಷರೆ, ಯಾವುದೇ ಅಧಿಕಾರಿಗಳು ಆಗಲಿ ಅಥವಾ ಮಂತ್ರಿಗಳು ಆಗಲಿ, ನಾವು ಮಾರ್ಗಸೂಚಿಗಳು ಏನಿರುತ್ತವೋ, ಅದರ ಪ್ರಕಾರ ನಡೆದುಕೊಳ್ಳ ಬೇಕಾಗಿರತಕ್ಕಂಥದ್ದು ನಮ್ಮ ಕರ್ತವ್ಯ ಕೂಡ ಆಗಿರುತ್ತದೆ. ಆ ಕಾರಣಕ್ಕಾಗಿ ತಾವು ಹೇಳಿದಂತೆ, ಮಂತ್ರಿಗಳು ಬಂದ ತಕ್ಷಣವೇ, ತಾವೇನು ಆ ಲೋಪದೋಷ ಗಳನ್ನು ಸರಿಪಡಿಸಬೇಕು ಎನ್ನುವುದಕ್ಕೆ ಪತ್ರ ಕೊಟ್ಟಿದ್ದೀರೋ ಮತ್ತು ವಾಪಸ್ ಕಡತ ತರಿಸಿಕೊಳ್ಳಬೇಕೆಂದು ಎಂದು ಹೇಳಿದ್ದೀರೋ, ಅದರ ಪ್ರಕಾರ ಅದನ್ನು ತರಿಸಿಕೊಂಡು, ಇದರ ಬಗ್ಗೆ ನಿಮ್ಮೊಡನೆ ಚರ್ಚೆ ಮಾಡಿ, ಅವರು ಸೂಕ್ತ ನಿರ್ಧಾರ ಮಾಡುತ್ತಾರೆ. ಇದರ ಜೊತೆಗೆ ಮಾನ್ಯ ವಿರೋಧ ಪಕ್ಷದ ನಾಯಕರು ಇದನ್ನು ಬರೇ ಅವರೇನೋ ಪ್ರಶ್ನೆ ಕೇಳಿದರು ಎಂದು ನೀವು ಅದಕ್ಕೆ ಉತ್ತರ ಕೊಡುವುದಲ್ಲ, ಕಾರ್ಯಕ್ರಮ ನಿಜವಾಗಿ ಪ್ರಾಮಾಣಿಕವಾಗಿ ಅನುಷ್ಠಾನವಾಗಬೇಕು ಎಂದು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಸಂಬಂಧಪಟ್ಟಂತಹ ಈ ಇಲಾಖೆಯ ವಿವಿಧ ಕಾಮಗಾರಿಗಳ ಬಗ್ಗೆ ಹಾಗೂ ಕ್ರಿಯಾ ಯೋಜನೆಯ ಬಗ್ಗೆಯೂ ಕೂಡ ಕ್ರಮ ಕೈಗೊಳ್ಳಲಿಕ್ಕೆ ಒಂದು ಸಭೆಯನ್ನು ಕರೆಯಲಿಕ್ಕೆ ಅವರಿಗೆ ವಿನಂತಿ ಮಾಡಿ, ಅದನ್ನು ಏರ್ಪಾಡು ಮಾಡಿಸುತ್ತೇನೆ.

**(ಆ) ವಿಷಯ: ರಾಜಾಜಿನಗರ ವಿಧಾನಸಭಾ ಕ್ಷೇತ್ರದ ಸರ್ಕಾರಿ ಶಾಲೆಗಳಲ್ಲಿ 9ನೇ ತರಗತಿ ಆರಂಭಿಸದಿರುವುದರಿಂದ ಆಗಿರುವ ತೊಂದರೆ ಬಗ್ಗೆ.**

**ಶ್ರೀ ನೆ.ಲ. ನರೇಂದ್ರಬಾಬು (ರಾಜಾಜಿನಗರ):** ಮಾನ್ಯ ಉಪಾಧ್ಯಕ್ಷರೆ, ರಾಜಾಜಿನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸರ್ಕಾರಿ ಶಾಲೆಗಳಲ್ಲಿ 9ನೇ ತರಗತಿ ಆರಂಭಿಸದಿರುವ ಪರಿಣಾಮವಾಗಿ ಆಗಿರತಕ್ಕಂಥ ಅನಾಹುತಗಳು, ಆ ವಿದ್ಯಾರ್ಥಿಗಳು ತಮ್ಮ ಶಿಕ್ಷಣವನ್ನು ಮುಂದುವರಿಸದೇ, ಅತಂತ್ರ ಸ್ಥಿತಿಯಲ್ಲಿರತಕ್ಕಂಥದ್ದು ಮತ್ತು ಸರ್ಕಾರಿ ಶಾಲೆಗಳು ಖಾಸಗಿ ಕಟ್ಟಡಗಳಲ್ಲಿ ನಡೆಸುತ್ತಿರುವುದಕ್ಕೆ ಬಾಡಿಗೆ ಕೊಡದೇ ಅವರು ಬೀಗಮುದ್ರೆ ಹಾಕಿರತಕ್ಕಂಥದ್ದು,

ಅದರಿಂದ ಉಂಟಾಗಿರುವ ದುಷ್ಪರಿಣಾಮಗಳ ಬಗ್ಗೆ ನಾನು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಗಮನ ಸೆಳೆಯುತ್ತೇನೆ.

**ಉಪಾಧ್ಯಕ್ಷರು:** ಮಂತ್ರಿಗಳು ಯಾರು ಇದಕ್ಕೆ ಉತ್ತರ ಹೇಳುತ್ತೀರಿ?

**ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ಸಚಿವರು):** ಮಾನ್ಯ ಉಪಾಧ್ಯಕ್ಷರೆ….

**ಶ್ರೀ ಜಿ.ವಿ.ಶ್ರೀರಾಮರೆಡ್ಡಿ:** ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಪ್ರಕಾಶ್ ರವರನ್ನು ಇವತ್ತು ತಾನೇ ಮಂತ್ರಿಮಂಡಲಕ್ಕೆ ತೆಗೆದುಕೊಳ್ಳಲಾಗಿದೆ. ಇಡೀ ಸರ್ಕಾರದ ಎಲ್ಲಾ ಇಲಾಖೆಗಳ ಪರವಾಗಿಯೂ ಕೂಡ ಅವರು ಉತ್ತರ ಕೊಡುವುದಕ್ಕೆ ಸಮರ್ಥರಾಗಿದ್ದಾರೆ. ಅದಕ್ಕೋಸ್ಕರವೇ ಮಾನ್ಯ ಪ್ರಕಾಶ್‌ರವರನ್ನು ಸಚಿವ ಸಂಪುಟಕ್ಕೆ ತೆಗೆದುಕೊಳ್ಳಲಾಗಿದೆ.

(ಗೊಂದಲ)

**ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :** ಮಾನ್ಯ ಉಪಾಧ್ಯಕ್ಷರೆ, ಇವತ್ತು cabinet expansion ಏತಕ್ಕೆ ಆಯಿತು ಎಂದು ಈಗ ನಮಗೆ ಗೊತ್ತಾಯಿತು. ಸರ್ಕಾರದ ಪರವಾಗಿ, ಪಕ್ಷದ ಪರವಾಗಿ ಮತ್ತು ಎಲ್ಲರ ಪರವಾಗಿ ಮಾನ್ಯ ಪ್ರಕಾಶ್‌ರವರು ಉತ್ತರ ಕೊಡುತ್ತಿದ್ದಾರೆ…

(ಗೊಂದಲ)

**ಶ್ರೀ ಬಸವರಾಜ ರಾಯರೆಡ್ಡಿ:** ಎಲ್ಲರೂ ತಮಗೇ power of attorney ಕೊಟ್ಟು ಬಿಟ್ಟಿದ್ದಾರೆ. I am happy you have been given a general power of attorney.

**ಶ್ರೀ ಎಂ.ಪಿ. ಪ್ರಕಾಶ್:** ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರಾಯರೆಡ್ಡಿಯವರೂ ಸಹ ಸಚಿವ ಸಂಪುಟದಲ್ಲಿ ಕೆಲಸ ಮಾಡಿರತಕ್ಕಂಥವರಾಗಿದ್ದಾರೆ. Power of attorney ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ. ಜಂಟಿ ಅಧಿಕಾರ ಎಲ್ಲರಿಗೂ ಕೂಡ ಇರುತ್ತದೆ. ಸರ್ಕಾರದ ಪರವಾಗಿ ಯಾರಾದರೂ ಒಬ್ಬ ಸಚಿವರು ಉತ್ತರ ಕೊಡಬೇಕಾಗುತ್ತದೆ. ಹಿಂದೆ ನಾನು ಅಲ್ಲಿ ಕುಳಿತಿದ್ದಾಗ, ನಾನು ಉತ್ತರ ಕೊಡಲು ಬರುತ್ತಿರಲಿಲ್ಲ. ಆದರೆ ಇವತ್ತು ನಾನು ಉತ್ತರ ಕೊಡಬಹುದು.

(ಗೊಂದಲ)

**ಶ್ರೀ ಬಸವರಾಜ ರಾಯರೆಡ್ಡಿ:** ಎಲ್ಲಾ ವಿಚಾರಗಳಿಗೂ ನಿಮ್ಮಿಂದಲೇ ಉತ್ತರ ಬಂದರೆ ಬಹಳ ಸಂತೋಷ. ಆದರೆ unfortunately, ಅವರು ನಿಮಗೆ ಏನು ಮಾಡುತ್ತಾರೆ ಎಂದರೆ, ನಿಮಗೆ ಕೇವಲ ಷರತ್ತಿನ ಮೇಲೆ ಮಾತ್ರ power of attoney ಕೊಡುತ್ತಾರೆ. ಅದೇ ಈಗ ತೊಂದರೆ ಬಂದಿರುವುದು.

**ಶ್ರೀ ಎಂ.ಪಿ. ಪ್ರಕಾಶ್:** ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಹೊರಟ್ಟಿಯವರು ಮೇಲ್ಮನೆಯಲ್ಲಿ ಇದ್ದಾರೆ. ಮಾನ್ಯ ಸದಸ್ಯರು ಬಹಳ ಗುರುತರವಾದಂತಹ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ನಾಳೆ ಆ ವಿಚಾರದಲ್ಲಿ ಸರ್ಕಾರದಿಂದ ಉತ್ತರವನ್ನು ಕೊಡಿಸುತ್ತೇನೆ.

**(ಇ) ವಿಷಯ: ಗುಲ್ಬರ್ಗಾ ನರ್ಸಿಂಗ್ ಕಾಲೇಜಿನಲ್ಲಿ (ಆದರ್ಶನಗರ) ವ್ಯಾಸಂಗ ಮಾಡುತ್ತಿರುವ 7 ವಿದ್ಯಾರ್ಥಿಗಳನ್ನು ಕೊಠಡಿಯಲ್ಲಿ ಕೂಡಿ ಹಾಕಿ ಹಿಂಸೆ ನೀಡಿರುವ ಬಗ್ಗೆ.**

**ಶ್ರೀ ಐವಾನ್ ನಿಗ್ಲಿ (ನಾಮ ನಿರ್ದೇಶನ ಹೊಂದಿದವರು):** ಸನ್ಮಾನ್ಯ ಉಪಾಧ್ಯಕ್ಷರೆ, I would like to draw the attention of Hon'ble Minister of Medical Education regarding harassment caused to the students by the management of Nursing College in Gulbarga.

**ಶ್ರೀ ಎಂ.ಪಿ. ಪ್ರಕಾಶ್:** ಮಾನ್ಯ ಉಪಾಧ್ಯಕ್ಷರೆ,

ಮಾನ್ಯ ಸದಸ್ಯರು ಗುಲ್ಬರ್ಗಾ ನರ್ಸಿಂಗ್ ಕಾಲೇಜ್ (ಆದರ್ಶನಗರ) ರವರು ಆ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ 7 ವಿದ್ಯಾರ್ಥಿಗಳನ್ನು ಕೊಠಡಿಯಲ್ಲಿ ಕೂಡಿ ಹಾಕಿ ಅವರಿಗೆ ಹಿಂಸೆ ನೀಡಿದ ವಿಷಯವನ್ನು ಪ್ರಸ್ತಾಪಿಸಿರುತ್ತಾರೆ.

ಈ ವಿಷಯದ ಕುರಿತು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ವರದಿ ಪಡೆಯಲಾಗಿದ್ದು ಗುಲ್ಬರ್ಗಾ ಕಾಲೇಜ್ ಆಫ್ ನರ್ಸಿಂಗ್ ಎಂಬ ಹೆಸರಿನ ಯಾವುದೇ ಕಾಲೇಜು ವಿಶ್ವವಿದ್ಯಾಲಯಕ್ಕೆ ಸಂಯೋಜನೆ ಹೊಂದಿರುವುದಿಲ್ಲ. ಅದರಂತೆಯೇ ವೈದ್ಯಕೀಯ ಶಿಕ್ಷಣ ನಿರ್ದೇಶಕರಿಂದ ಪಡೆದ ವರದಿಯಂತೆ ಗುಲ್ಬರ್ಗಾದಲ್ಲಿ ಆಲ್ ಕರೀಮ್ ನರ್ಸಿಂಗ್ ಕಾಲೇಜ್ ಅಸ್ತಿತ್ವದಲ್ಲಿದ್ದು, ಈ ಕಾಲೇಜಿಗೆ ಸರ್ಕಾರದ ಆದೇಶ ಸಂಖ್ಯೆ: ಆಕುಕ 398 ಎಂಪಿಎಸ್ 2003, ದಿನಾಂಕ 30.12.2003ರಲ್ಲಿ 60 ವಿದ್ಯಾರ್ಥಿ ಪ್ರವೇಶ ಮಿತಿಯ ಬಿ.ಎಸ್ಸಿ ನರ್ಸಿಂಗ್ ಕೋರ್ಸಿನೊಂದಿಗೆ ಕೆಲವು ಷರತ್ತಿಗೊಳಪಡಿಸಿ 2004–05ನೇ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರುವಂತೆ ಸಂಯೋಜನೆ ನೀಡಲು ಶಿಫಾರಸ್ಸು ಮಾಡಲಾಗಿದೆ. ಆದರೆ, ಭಾರತೀಯ ಶುಶ್ರೂಷ ಪರಿಷತ್ತಿನವರು ಸದರಿ ಕಾಲೇಜಿಗೆ 20 ಸೀಟುಗಳಿಗೆ ಮಾತ್ರ ಅನುಮತಿ ನೀಡಿರುತ್ತಾರೆ.

ಗುಲ್ಬರ್ಗಾ ನರ್ಸಿಂಗ್ ಕಾಲೇಜು (ಆದರ್ಶನಗರ) ರವರು ವಿದ್ಯಾರ್ಥಿಗಳಿಗೆ ಕೂಡಿ ಹಾಕಿ ಹಿಂಸೆ ನೀಡಿದ್ದಾರೆಂಬ ಆರೋಪದ ಬಗ್ಗೆ